ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ತಲಾ ಒಂದೊಂದು minute ಪ್ರಸ್ತಾಪ ಮಾಡಲು ಅವಕಾಶ ಕೊಟ್ಟು ಆಮೇಲೆ ನಿಮ್ಮ ruling ಕೊಡಿ.

11.30 A.M.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ನಿಮಿಷ ಪ್ರಸ್ತಾಪಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದೊಂದು ನಿಮಿಷ ಆದರೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್. ರಾಜೇಂದ್ರನ್ : ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಆಮೇಲೆ ತಾವು ರೂಲಿಂಗ್ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ನೀವು ಏನಾದರೂ ರೂಲಿಂಗ್ ಕೊಡಿ. ನೀವು ಏನು ಕೊಟ್ಟರು ನಾವು ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು : ನಂತರ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತೀರ್ಪಿನ ಮೇಲೆ ಹೋಗುವುದಕ್ಕೆ ಬರುವುದಿಲ್ಲ. Adjournment motion, privilege motion ಗೆ ತಾವು ತೀರ್ಮಾನ ಕೊಟ್ಟು ನಂತರ business ನಡೆಸಬೇಕು.

ಅಧ್ಯಕ್ಷರು : ಆಯಿತು. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಮೊದಲು ಹಕ್ಕುಚ್ಯುತಿ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ.

(ಆ) ವಿಷಯ: ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಕೆ. ಪಾಟೀಲರು ರಾಜ್ಯಪಾಲರಿಗೆ ಬರೆದಿರುವ ಪತ್ರದ ಬಗ್ಗೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಹೆಚ್.ಕೆ. ಪಾಟೀಲ್‌ರವರು ರಾಜ್ಯದ ರಾಜ್ಯಪಾಲರಿಗೆ ಒಂದು ಪತ್ರವನ್ನು ಬರೆದಿದ್ದಾರೆ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್: ಶ್ರೀಮಾನ್ ಹೆಚ್.ಕೆ. ಪಾಟೀಲ್‌ರವರು ರಾಜ್ಯಪಾಲರಿಗೆ ಕರ್ನಾಟಕದಲ್ಲಿ ಇರತಕ್ಕಂಥ ವಿಶೇಷವಾಗಿ ಇರುವ ರಾಜಕೀಯ ಪರಿಸ್ಥಿತಿ ಬಗ್ಗೆ, ಅದು ಲಂಚನ ಹಗರಣದ ಬಗ್ಗೆ ಇರಬಹುದು, Law and Order ಬಗ್ಗೆ ಇರಬಹುದು, ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿ ರಾಜ್ಯಪಾಲರಿಗೆ ಪತ್ರವನ್ನು ಬರೆದಿದ್ದಾರೆ. ರಾಜ್ಯಪಾಲರೂ ಕೂಡ ಅವರಿಗೆ ಉತ್ತರವನ್ನು ಕೊಟ್ಟಿದ್ದಾರೆ. ತಾವು ಯಾವ ಯಾವ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ? ಇದಕ್ಕೆ ನನ್ನ concern ಇದೆ. ಅದರ ಬಗ್ಗೆ ಚಿಂತನೆ ಮಾಡುತ್ತಿದ್ದೇನೆ ಎನ್ನತಕ್ಕ ಮಾತನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಎರಡೂ ಪತ್ರಗಳನ್ನೂ ತಮಗೆ ಕಳಿಸಿಕೊಡುತ್ತೇನೆ. ಇವತ್ತು ನಾವು ವಿರೋಧ ಪಕ್ಷದಲ್ಲಿ ಇದ್ದು ನಾಡಿದ್ದು ಮಾನ್ಯ ರಾಜ್ಯಪಾಲರು ಕೂಡ ಈ ಸದನಕ್ಕೆ ಬಂದು ಸದನವನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ. ಯಾವ ರೀತಿಯಾಗಿ ತಮ್ಮ ಕಾಲದಲ್ಲಿ ಘನತೆವೆತ್ತ ರಾಷ್ಟ್ರಪತಿಗಳು ಕೂಡ ಬಂದು ಈ ಒಂದು ಸಂಸತ್ ಸದಸ್ಯರಿಗೆ, ವಿಧಾನ ಸಭಾ ಸದಸ್ಯರಿಗೆ ಏನೊಂದು ಹಿತೋಪದೇಶ

ಕೊಟ್ಟಿದ್ದಾರೆ ಸರ್ಕಾರಕ್ಕೆ ಯಾವ ಯಾವ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಕೂಡ ಹೇಳಿದ್ದಾರೆ. ಅದಕ್ಕೆ ನಾವು ಮೂರು ದಿನಗಳ ಕಾಲ ವಿಶೇಷ ಅಧಿವೇಶನ ಕರೆಸಿ ಚರ್ಚೆ ಮಾಡಿದ್ದೇವೆ. ಇವತ್ತು ನಮ್ಮ ರಾಜ್ಯದ ಘನತೆವೆತ್ತ ರಾಜ್ಯಪಾಲರು ನಾಡಿದ್ದು ಬಂದು ಇಲ್ಲಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಆ ಸಂದರ್ಭದಲ್ಲಿ ಇವತ್ತು ರಾಜ್ಯಪಾಲರು ಉತ್ತರ ಕೊಟ್ಟಿದ್ದಾರೆ. ರಾಜ್ಯಪಾಲರು ಬರೆದಂತಹ ಪತ್ರದಲ್ಲಿ ಕೂಡ ಅವರು ಹೇಳಿದ್ದಾರೆ. "ನೀವು ಹೇಳತಕ್ಕ ವಿಷಯಗಳನ್ನೂ ಒಪ್ಪುತ್ತಿದ್ದೇನೆ. ಅವು ಪ್ರಸ್ತುತ. ಈ ಒಂದು ಪರಿಸ್ಥಿತಿಯಲ್ಲಿ ಇದರ ಬಗ್ಗೆ ನಾನು ಕ್ಲಾರಿಫಿಕೇಶನ್ ತೆಗೆದುಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಚಿಂತನೆ ಮಾಡುತ್ತೇನೆ" ಎಂದು ಅವರು ಹೇಳಿದ್ದಾರೆ. ಇದಕ್ಕೆ ತಾವು ತರಾತುರಿಯಲ್ಲಿ ಗಡಿಭಾಗದಲ್ಲಿ ಅಧಿವೇಶನಕ್ಕೆ ಬಂದಿದ್ದೀರಿ. ನಿನ್ನೆ ಕೂಡ ನಾವು ಹೇಳಿದ್ದೇವೆ. ಈ ಅಧಿವೇಶನದಲ್ಲಿ ಯಾವ ಯಾವ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಬೇಕು, ಏನು ಅಜೆಂಡಾ ಇಡಬೇಕು ಎಂದು ಹೇಳಿದ್ದೆವು, ಅಜೆಂಡಾ ಇಡಲಿಲ್ಲ. ಆದರೂ ಕೂಡ ಬೆಳಗಾಂನಲ್ಲಿ ಆಗತಕ್ಕ ಅಧಿವೇಶನದಲ್ಲಿ ಸರ್ಕಾರದ ಈ ನಿರ್ಣಯವನ್ನು ಒಪ್ಪುತ್ತೇವೆನ್ನತಕ್ಕಂತಹ: ಮಾತನ್ನು ನಾವು ಹೇಳಿದ್ದೇವೆ. ನಿನ್ನೆ ಕೂಡ ಮಹಾಜನ್ ವರದಿಯ ಬಗ್ಗೆ ಒಂದು ರೆಸಲ್ಯೂಷನ್ ತಂದೆವು. ಅರ್ಥಪೂರ್ಣವಾಗಿ ಅಧಿವೇಶನ ಆಗಬೇಕಾದರೆ ಮಹಾಜನ್ ವರದಿಯೇ ಅಂತಿಮ ವರದಿ ಎನ್ನತಕ್ಕಂತಹ ತೀರ್ಮಾನವನ್ನು ಕರ್ನಾಟಕ ಸರ್ಕಾರವೇ ತೆಗೆದುಕೊಳ್ಳಬೇಕು. ನಿನ್ನೆ ಮುಖ್ಯಮಂತ್ರಿಗಳು ಒಪ್ಪಿದರು. ಅವರು ನಿರ್ಣಯ ಮಂಡಿಸಿದರು. ನಾವು ಅನುಮೋದನೆಯನ್ನೂ ಕೂಡ ಮಾಡಿದ್ದೇವೆ. There has been a clear message ಜನರಿಗೆ ಒಂದು ಒಳ್ಳೆಯ ಸಂದೇಶ ಕೊಟ್ಟಂತೆ ಆಗಿದೆ. ಅದೇ ರೀತಿಯಾಗಿ ನಾಡಿದ್ದು ರಾಜ್ಯಪಾಲರು ಬಂದಾಗ ಅವರು ಮಾಡುವ ಭಾಷಣದ ಮೇಲೆ ಚರ್ಚೆ ಇಲ್ಲ. ಅವರೂ ಬಂದು ನಮಗೆ ಸಂದೇಶ ಕೊಡಬಹುದು, ಭಾಷಣ ಮಾಡಬಹುದು. ಇವತ್ತು ಗೌರವಾನ್ವಿತ ರಾಜ್ಯಪಾಲರು ಹೇಳತಕ್ಕಂತಹದ್ದನ್ನು ಕೂಡ ಪಾಲನೆ ಮಾಡತಕ್ಕದ್ದು ನಮ್ಮ ಆದ್ಯ ಕರ್ತವ್ಯ. ಇವತ್ತು ಇವತ್ತು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಯಾವ ಪತ್ರವನ್ನು ಶ್ರೀಮಾನ್ ಪೆಜ್.ಕೆ. ಪಾಟೀಲ್‌ರವರು, ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರು ರಾಜ್ಯಪಾಲರಿಗೆ ಬರೆದಿದ್ದಾರೆ, ಅದಕ್ಕೆ ರಾಜ್ಯಪಾಲರೂ ಕೂಡ ಉತ್ತರ ಏನು ಕೊಟ್ಟಿದ್ದಾರೆ? ಉತ್ತರದಲ್ಲಿ ನಮೂದಿಸಿದ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡತಕ್ಕ ರೀತಿಯಲ್ಲಿ ನಮಗೆ ಅನುವು ಮಾಡಿಕೊಡಬೇಕು ಮತ್ತು ನಾವೆಲ್ಲರೂ ಕೂಡ ಆ ಒಂದು ಚರ್ಚೆಯಲ್ಲಿ ಭಾಗವಹಿಸಬೇಕು ಎನ್ನತಕ್ಕ ರೀತಿಯಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಅದನ್ನು ಕಳುಹಿಸಿಕೊಡಿ. ಈಗ ಕಾರ್ಯದರ್ಶಿಯವರ ವರದಿ.

ಶ್ರೀ ಎಸ್.ಬಿ. ಪಾಟೀಲ್ (ಅಪರ ಕಾರ್ಯದರ್ಶಿ) : ಮಾನ್ಯ ಅಧ್ಯಕ್ಷರೆ, ಪನ್ನೆರಡನೇ ವಿಧಾನಸಭೆಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರಿಂದ : ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಅನುಬಂಧ-1)

ಅಧ್ಯಕ್ಷರು : ಮಂಡಿಸಲಾಯಿತು.